

# ಡ್ರಗ್ಸ್, ಸೆಕ್ಸ್ ಮತ್ತು ಸಿನಿಮಾ

ಕನ್ನಡ ಚಿತ್ರರಂಗದಲ್ಲೀಗ ಡ್ರಗ್ಸ್ ಬಿರುಗಾಳಿ. ಸಿನಿಮಾರಂಗದ ಕೆಲವು ಕಲಾವಿದರು, ತಂತ್ರಜ್ಞರು ಮಾದಕವಸ್ತುಗಳನ್ನು ಸೇವಿಸುತ್ತಾರೆ ಎನ್ನುವ ಮಾತು–ಕಥೆಗಳು, ಆರೋಪಗಳು ಕೊರೊನಾ ಸೋಂಕಿನ ಆತಂಕವನ್ನು ಮರೆಸುವಷ್ಟು ಪ್ರಖರವಾಗಿ ಕೇಳಿಬರುತ್ತಿವೆ. ಇದಕ್ಕೆ ಪ್ರತಿಯಾಗಿ ಚಿತ್ರೋದ್ಯಮದ ಕೆಲವರು, 'ಉದ್ಯಮದಲ್ಲಿ ಡ್ರಗ್ಸ್ ಸೇವಿಸುವವರು ಯಾರೂ ಇಲ್ಲ. ಉದ್ಯಮದ ವರ್ಚಸ್ಸಿಗೆ ವಿನಾಕಾರಣ ಮಸಿ ಬಳಿಯಲಾಗುತ್ತಿದೆ' ಎಂದು ಸಿಡಿಮಿಡಿ ಎನ್ನುತ್ತಿದ್ದಾರೆ. ಆದರೆ, ಸಿನಿಮಾರಂಗದ ಇತಿಹಾಸ ಬಲ್ಲವರಿಗೆ ಅಲ್ಲಿನ 'ಅಮಲಿನ ಸಂಗತಿ' ಹೊಸತೇನೂ ಅಲ್ಲ. ಮದ್ಯ ಮತ್ತು ಮಾನಿನಿಯರ ಅಮಲು ಎಲ್ಲ ಭಾಷೆಗಳ ಸಿನಿಮಾರಂಗದ ಅಲಿಖಿತ ಇತಿಹಾಸದ ಭಾಗವೇ ಆಗಿದೆ. ತೆರೆಯ ಮೇಲಿನ ಗ್ಲಾಮರ್ ಹಾಗೂ ಅತಿರೇಕದ ವರ್ತನೆಗಳನ್ನು ನಿಜಜೀವನದಲ್ಲೂ ಆರೋಪಿಸಿಕೊಂಡಿರುವ ಜನರು ಚಿತ್ರೋದ್ಯಮದಲ್ಲಿ ಸಾಕಷ್ಟು ಮಂದಿಯಿದ್ದಾರೆ. ಎರಡು ವರ್ಷಗಳ ಹಿಂದೆ ಕೇಳಿಬಂದ 'ಮೀ ಟು' ಆರೋಪಗಳ ಸಂದರ್ಭದಲ್ಲಿ ಈಗಿನಂತೆಯೇ ಚಿತ್ರರಂಗ ಬೆಚ್ಚಿಬಿದ್ದಿತ್ತು ಹಾಗೂ ತನ್ನ ಪಾವಿತ್ರ್ಯದ ಬಗ್ಗೆ ಗಟ್ಟಿಯಾಗಿ ಹೇಳಿಕೊಂಡಿತ್ತು. ಸಜ್ಜನಿಕೆಯ ಸೋಗಿನ ಪ್ರದರ್ಶನದಲ್ಲಿ, ಲೈಂಗಿಕ ಕಿರುಕುಳದ ಬಗ್ಗೆ ಮಾತನಾಡಲು ತೊಡಗಿದ ನಟಿಯರು ಮೌನದ ಮೊರೆಹೋದರು. ಈಗ ಮಾದಕ ವಸ್ತುಗಳ ಚರ್ಚೆಯ ಸಂದರ್ಭದಲ್ಲೂ ಚಿತ್ರೋದ್ಯಮ ಆತ್ಮವಿಮರ್ಶೆಗೆ ಬೆನ್ನುಹಾಕುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಯಾವುದೇ ಕ್ಷೇತ್ರ ಆರೋಪಕ್ಕೆ ಗುರಿಯಾದಾಗ, ಆ ವಲಯಕ್ಕೆ ಸಂಬಂಧಿಸಿದವರು ಮುಕ್ತ ತನಿಖೆಗೆ–ಮಾತುಕತೆಗೆ ಅವಕಾಶ ಕಲ್ಪಿಸಬೇಕು. ಚಿತ್ರೋದ್ಯಮದ ಮಂದಿಯೇ 'ಆಫ್ ದಿ ರೆಕಾರ್ಡ್' ಮಾತುಕತೆಗಳಲ್ಲಿ ಉದ್ಯಮದ ಕರಾಳಮುಖಗಳ ಬಗ್ಗೆ ವರ್ಣರಂಜಿತ ಕಥೆಗಳನ್ನು ಹೇಳುತ್ತಾರೆ; ಅನೈತಿಕ, ಕಾನೂನುಬಾಹಿರ ಚಟುವಟಿಕೆಗಳನ್ನು ಬಣ್ಣಿಸುತ್ತಾರೆ. ಅಮಲೆನ್ನುವುದು ಡ್ರಗ್ಸ್ ರೂಪಕ್ಕಷ್ಟೇ ಸೀಮಿತವಾದುದಲ್ಲ – ಅದು ಮದ್ಯದ ರೂಪದಲ್ಲೂ ಹೆಣ್ಣಿನ ಶೋಷಣೆಯ ರೂಪದಲ್ಲೂಇರುತ್ತದೆ. ಈ ಅಮಲಿನ ಜೊತೆಗೆ ಡ್ರಗ್ಸ್ ಕೂಡ ಚಿತ್ರರಂಗಕ್ಕೆ ಸೇರ್ಪಡೆಯಾಗಿದೆ ಎನ್ನುವುದು ಇತ್ತೀಚಿನ ಸುದ್ದಿ. ಡ್ರಗ್ಸ್ ಮತ್ತು ಸೆಕ್ಸ್‌ನ ಈ 'ಅಮಲಿನ ಕಥೆ' ನಾಗರಿಕ ಜಗತ್ತನ್ನು ನಾಚಿಸುವಂತಿದೆ, ಬೆಚ್ಚಿಬೀಳಿಸುವಂತಿದೆ. ಇದು ಚಿತ್ರಕಥೆಯಲ್ಲ, ಸತ್ಯಕಥೆ. ಭ್ರಮೆಗಳನ್ನು ಮಾರುತ್ತ ಮಾರುತ್ತ ತಾನೇ ಭ್ರಮಾತ್ಮಕ ಜಗತ್ತಿನ ಭಾಗವಾದಂತಿರುವ ಚಿತ್ರೋದ್ಯಮದ ಆತ್ಮವಿಮರ್ಶೆಗೆ ಒತ್ತಾಯಿಸುವ ಕಥೆ.

■ ಮಾಂಟೊ